ಮಂತ್ತು ನಿರ್ಲಕ್ಷ್ಯಕ್ಕೆ ಉದಾಹರಣ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದ ರೀತಿಯು ಈ ಕ್ರಮದ ಕುರಿತು ಇಲಾಖಾ ವಿಚಾರಣೆ ನಡೆಸಿ ಕೂಡಲೇ ತೊಕಾರು ಗ್ರಾಮಕ್ಕೆ ನಲ್ಲಿ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಆದೇಶ ನೀಡಬೇಕೆಂದು ಗ್ರಾಮಾಭಿವೃದ್ಧಿ ಸಚಿವರಿಗೆ ಒತ್ತಾಯಿಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಆ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ. ಅದನ್ನು ತರಿಸಿ ಹೇಳುತ್ತೇನೆ.

2) ಹುಕ್ಕೇರಿ ಭೂ ನ್ಯಾಯ ಮಂಡಲಿಗೆ ನಾಮಕರಣ ಹೊಂದಿದ ಸದಸ್ಯರನ್ನು ವಜಾ ಮಾಡುವ ಬಗ್ಗೆ

† ಶ್ರೀ ಮಲ್ಲಾರಿಗೌಡ ಎಸ್, ಪಾಟೀಲ್.—ಅಧ್ಯಕ್ಷರೇ, ಹುಕ್ಕೇರಿ ಭೂ ನ್ಯಾಯ ಮಂಡಲಿಯ ನಾಮಕರಣವಾಗಿ ಸುಮಾರು ದಿನಗಳಾದರೂ ಸಭೆಯು ಸದಸ್ಯರ ಗೈರು ಹಾಜರಿಂದಾಗಿ ನಡೆಯುತ್ತಿಲ್ಲ. ನಾಮಂಕರಣ ಹೊಂದಿರುವ ಸದಸ್ಯರುಗಳ ಹೆಸರನ್ನು ಮರುಪರಿಶೀಲನೆ ಮಾಡುವಂತೆ ಹಾಗೂ ಸ್ಥಳೀಯ ಶಾಸಕರನ್ನು ವಜಾ ಮಾಡುವಂತೆ ಜನರು ಒತ್ತಾಯಿಸುತ್ತಿದ್ದು ಸಭೆಗೆ ಗೈರುಹಾಜರಿದ್ದ ನಾಮಕರಣ ಹೊಂದಿರುವ ಸದಸ್ಯರನ್ನು ಕೂಡಲೆ ವಜಾ ಮಾಡಿ ಹೊಸ ಭೂ ನ್ಯಾಯ ಮಂಡಲಿಯನು ರಚಿಸೆ ಮಾಡುವುದಕ್ಕಾಗಿ ಸರ್ಕಾರದ ಕ್ರಮವೇನು ?

ರಾಜಕೀಯ ದುರುದ್ದೇಶದಿಂದ ವಿರೋಧ ಪಕ್ಷದಿಂದ ನಾಮಕರಣ ಹೊಂದಿರುವ ಶಾಸಕರನ್ನು ವಜಾ ಮಾಡುವಂತೆ ಸ್ಥಳೀಯ ಮುಖಂಡರು ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದು ಇದಕ್ಕೆ ಸರ್ಕಾರ ಮಣಿದಿದೆ. ಮಾನ್ಯ ಮುಖ್ಯಮಂತ್ರಿಗಳು ಹಿಡಕಲ್ ಜಲ ಯೋಜನೆಗೆ ಬಂದಾಗ ಈ ಬಗ್ಗೆ ಪತ್ರಕರ್ತರು ಕೂಡ ಪ್ರಶ್ನೆಯನ್ನು ಕೇಳಿರುತ್ತಾರೆ. ರಾಜಕೀಯ ದುರುದ್ದೇಶದಿಂದ ಕೂಡಿರುವ ಜನರನ್ನು ನೇರವಾಗಿ ಸರ್ಕಾರ ಬೆಂಬಲಿಸುತ್ತಿದೆಯೆಂದು ಆರೋಪ ಮಾಡಬೇಕಾಗುತ್ತದೆ.

ಜನರಿಗಾಗಂತ್ತಿರುವ ತೊಂದರೆಯನ್ನು ಕೂಡಲೆ ನಿವಾರಿಸುವಂತೆ ಹಾಗೂ ಸದನದಲ್ಲಿ ಈ ಬಗ್ಗೆ ಹೇಳಿಕೆ ನೀಡುವಂತೆ ಕಂದಾಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಭೂ ನ್ಯಾಯ ಮಂಡಲಿ ರಚನೆಯಾದ ಮೇಲೆ ೩ ಸಭೆಗಳು ಆಗಿವೆ. ಅಲ್ಲಿ ಮಲ್ಲಾರಿಗೌಡರನ್ನು ಹೊರತುಪಡಿಸಿ ಉಳಿದ ಸದಸ್ಯರು ಗೈರುಹಾಜರಾಗಿದ್ದಾರೆ. ಈ ಬಗ್ಗೆ ಪುನರ್ ಪರಿಶೀಲನೆಗೆ ಆಲೋಚನೆ ಮಾಡಿದ್ದು ಅದನ್ನು ಆದಷ್ಟು ಬೇಗ ಮಾಡುತ್ತೇವೆ. ಇನ್ನು, ಇಲ್ಲಿ ರಾಜಕೀಯ ದುರುದ್ದೇಶ ಏನೂ ಇಲ್ಲ. ಇದರಲ್ಲಿ ಮಾನ್ಯ ಸದಸ್ಯರೂ ಸಹಾ ಇದ್ದಾರೆ. ಯಾರಿಂದಲೂ ಒತ್ತಡ ಬರುವ ಪ್ರಶ್ನೆ ಇಲ್ಲ. ಆದಷ್ಟು ಜಾಗ್ರತೆ ಇದನ್ನು ಪುನರ್ ರಚನೆ ಮಾಡುತ್ತೇವೆ.

3) ರಾಜ್ಯದಲ್ಲಿ ಆಲೂಗಡ್ಡೆ ಬೆಳೆಗೆ ಬೆಂಬಲ ಬೆಲೆ ನೀಡುವುದು.

† ಶ್ರೀ ಆರ್. ವೆಂಕಟರಾಮಯ್ಯ... ಅಧ್ಯಕ್ಷರೇ, ಕರ್ನಾಟಕಾದ್ಯಂತ ರೈತರು ಆಲೂಗಡ್ಡೆ ಬೆಳೆಯನ್ನು ಇಟ್ಟು ಫಸಲು ರೂಪಣೆಗೆ ಬಂದಿದೆ ಹಾಗೂ ಅದು ಮಾರ್ಕೆಟ್ಟಿಗೆ ಕಳುಹಿಸಲ್ಪಡುತ್ತಿದೆ. ಬಿತ್ತನೆ ಬೀಜವನ್ನು ಕ್ವಿಂಟಾಲ್‌ಗೆ ೪೦೦ ರೂಪಾಯಿನಂತೆ ಕೊಂಡು ಬೆಳೆ ಇಟ್ಟರು. ಈಗ ಅದರ ಬೆಲೆ ಕ್ವಿಂಟಾಲ್‌ಗೆ ೧೮೦ ರೂಪಾಯಿಗೆ ತೆಗೆದುಕೊಳ್ಳುವವರಿಲ್ಲದೆ ಅದನ್ನು ಡಿಸ್ಪೋಸ್ ಸೇಲ್ ಅತಿ ಕಡಿಮೆ ಬೆಲೆಗೆ ಮಾರಲ್ಪಟ್ಟ ರೈತರು ದಿವಾಳಿಗೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ ವ್ಯವಸಾಯ ಇಲಾಖೆಯಿಂದ ಅವರಿಗೆ ತಕ್ಕ ರಕ್ಷಣೆ ಕೊಟ್ಟಿಲ್ಲ ಮತ್ತು ಬೆಲೆಯನ್ನು ಸ್ಥಿರೀಕರಿಸಲು ಪ್ರಯತ್ನ ಪಡದೆ ರೈತರ ಕಷ್ಟ ಹೇಳಲಸದಳವಾಗಿದೆ ಯಾದುದರಿಂದ ಮಾನ್ಯ ವ್ಯವಸಾಯ ಮಂತ್ರಿಗಳು ಆಲೂಗಡ್ಡೆಗೆ ಸಪೋರ್ಟ್ ಪ್ರೈಸ್ ಡಿಕ್ಲೇರ್ ಮಾಡಿ ರೈತರ ನೆರವಿಗೆ ಬರಲು ಮನವಿ ಮಾಡಿ ಮಾನ್ಯ ವ್ಯವಸಾಯ ಮಂತ್ರಿಗಳಿಗೆ ಈ ಬಗ್ಗೆ ಸೂಚನೆ ಕೊಡಲಾಗಿದೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಆಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.